## ಇಲ್ಲಿಯವರೆಗೆ



ಅನುಮಾನ–ಅನುರಾಗದ ನಡುವೆ ಗಾಂಧಿ ಮತ್ತು ಕಸ್ತೂರ್ ದಾಂಪತ್ಯ ಚಿಗುರತೊಡಗಿತು. ಯೌವನದ ಕಾವಿನ ಜೊತೆಗೆ ಕುಟುಂಬದ ಜವಾಬ್ದಾರಿಯನ್ನೂ ಮರೆಯದ ಮೋಹನದಾಸ, ಕಸ್ತೂರ್ ಕಣ್ಣುಗಳಲ್ಲಿನ ಭಾವಗಳನ್ನು ನಿರ್ಲಕ್ಷಿಸಿ ಇಂಗ್ಲೆಂಡ್‌ಗೆ ಹೋಗಿ ಬ್ಯಾರಿಸ್ಟರ್ ತುರಾಯಿ ಸಿಕ್ಕಿಸಿಕೊಂಡಿದ್ದಾಯಿತು. ಆದರೆ, ವಕೀಲಿಕೆಯ ಪಟ್ಟುಗಳ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಿದ್ದು ತವರಲ್ಲ; ದಕ್ಷಿಣ ಆಫ್ರಿಕಾ. ವಕೀಲಿಕೆ ಮಾತ್ರವಲ್ಲ, ಗಾಂಧಿ ರೂಢಿಸಿಕೊಳ್ಳುತ್ತಿದ್ದ ಮೌಲ್ಯಗಳನ್ನು ಒರೆಗೆ ಹಚ್ಚಲಿಕ್ಕೂ ಆಫ್ರಿಕಾ ಪ್ರಯೋಗಶಾಲೆಯಾಯಿತು.

ಚುಚ್ಚಿದಂತಿತ್ತು. ಆತ ಅದನ್ನು ಅವಮಾನವೆಂದು ಭಾವಿಸಿದ. ತಕ್ಷಣ, 'ಹೌದು. ನಾನು ನೀವಲ್ಲ. ಆದ್ರೆ ನಿಮ್ಮ ಮಗ' ಎಂದ. ಗಾಂಧಿ ದಿಟ್ಟಿಸಿದರು. ಇದು ಯಾಕೋ ಹಾದಿ ತಪ್ಪುತ್ತಿದೆ ಅನ್ನಿಸಿ ಕಸ್ತೂರ್‌ಬಾ ಮಧ್ಯ ಪ್ರವೇಶಿಸಿದರು.

'ಈಗ ವಾದ ವಿವಾದ ಬೇಡ. ವಯಸ್ಸಿಗೆ ಬಂದ ಮಗ ಮದ್ವೆ ಆಗ್‌ಬೇಕು ಅಂತಿದಾನೆ. ವ್ಹೋರಾ ಅವ್ರ್ ಮಗಳನ್ನ ಪ್ರೀತ್ಸಿದಾನೆ. ಒಪ್ಪಿಗೆ ಕೊಡಿ' ಎಂದರು.

'ಮದ್ವೆ ಆಗೋದ್ ಬೇಡ ಅಂತ ನಾನ್ ಹೇಳಲ್ಲ. ಇನ್ನಷ್ಟು ಕಾಲ ಬ್ರಹ್ಮಚರ್ಯ ಪಾಲಿಸು ಅಂತ ಹೇಳ್ತಿದ್ದೀನಿ ಅಷ್ಟೆ.' ಗಾಂಧಿ ದೃಢವಾಗಿ ನುಡಿದರು.

ಹರಿಲಾಲ್‌ಗೆ ಸಹನೆ ಕೈಕೊಟ್ಟಿತು.

ಇನ್ನು ಕೇಳಿ ಉಪಯೋಗವಿಲ್ಲ ಅನ್ನಿಸಿತು.

'ಮದ್ವೆ ಆದೋರು – ಬ್ರಹ್ಮಚರ್ಯ ಪಾಲಿಸು – ಅಂತ ನಮಗೆ ಉಪದೇಶ ಕೊಡೋದು ತುಂಬಾ ಸುಲಭ. ನಿಮ್ಮಿಷ್ಟ ನಿಮ್ದು. ನನ್ನಿಷ್ಟ ನಂದು. ಬ್ರಹ್ಮಚರ್ಯದ ಬಗ್ಗೆ ನಿಮಗೆ ಅಷ್ಟೊಂದು ಆಸೆ ಇದ್ರೆ ನೀವೇ ಪಾಲಿಸ್ಕೊಳ್ಳಿ' ಎಂದವನೇ ಹರಿ ಉರಿಯಾಗಿ ಹೊರಟ.

ಕಸ್ತೂರ್‌ಬಾ ತಳಮಳಿಸಿದರು.

ಗಾಂಧಿಯವರ ಕಡೆ ನೋಡಿದರು:

ಗಾಂಧಿ ಅಂತರಂಗದ ಅಗ್ನಿ!

ಹೋಗುತ್ತಿದ್ದ ಹರಿ ಕಡೆ ನೋಡಿದರು:

ಹರಿ, ಬಹಿರಂಗದ ಬೆಂಕಿ!

ಇಬ್ಬರ ನಡುವೆ ತಾನು ಏನು?

ಸುಡುವ ಬಡ ಮಡಿಲು!

ಕಸ್ತೂರ್‌ಬಾ ಮತ್ತೆ ಗಾಂಧಿಗೆ ಹೇಳಿ ನೋಡಿದರು. 'ಹರಿ, ಹಸುಗೂಸಲ್ಲ. ಆತನ ಮದ್ವೆ ಮುಂದೂಡೋದ್ ಯಾಕೆ? ಒಪ್ಪಿಗೇನೆ ಕೇಳ್ದೆ ಮದ್ವೆ ಆಗ್ಬಿದಾನ? ನೀವು ಸುಮ್ನೆ ಒಪ್ಪಿದ್ರಾಗಿತ್ತು ಎಂದರು. ಮೊದ್ಲು ನಾನ್ ಹೇಳಿದ್ದಕ್ ಅವ್ನ್ ಒಪ್ಪಲಿ. ಅದ್ರ ಬದ್ಲು ಕೆಣಕು ಮಾತಾಡ್ತಾನಲ್ಲ. ಸರೀನ? ನೀನ್ ಸುಮ್ನೆ ಇರು ಈ ವಿಷಯದಲ್ಲಿ' ಎಂದವರೇ ಗಾಂಧಿ ಪುಸ್ತಕದತ್ತ ಕಣ್ಣು ನೆಟ್ಟರು.

ಕಸ್ತೂರ್ ಬಾ ಅಲ್ಲಿಂದ ಹೊರಟು ಹರಿಲಾಲ್ ಇದ್ದಲ್ಲಿಗೆ ಬಂದರು. ಸಾಂತ್ವನ ಹೇಳಿದರು:

'ಬೇಜಾರ್ ಮಾಡ್ಕೊಬೇಡ ಹರಿ. ನಿಮ್ಮಪ್ಪನ್ ಸ್ವಭಾವ ನಿನಗ್ ಗೊತ್ತಲ್ಲ?'

'ಅವ್ರಲ್ಲಿ ಅಪ್ಪ ಕಾಣುಸ್ತಿಲ್ಲ ಅಮ್ಮ' ಎಂದು ಹರಿ ನೇರವಾಗಿ ನುಡಿದ.

'ನಾನ್ ಮತ್ತೆ ಅವ್ರ ಜೊತೆ ಮಾತಾಡ್ತೀನಿ; ಈಗ ಸ್ವಲ್ಪ ಸುಮ್ನಿರು' ಎಂದು ಕಸ್ತೂರ್‌ಬಾ ಹೇಳಿದ ಕೂಡಲೇ ಹರಿಲಾಲ್‌ಗೆ ಕಿರಿಕಿರಿಯಾಯಿತು.

'ಅವ್ರ್ ಹತ್ರ ಮಾತಾಡಿ ಏನ್ ಪ್ರಯೋಜನ? ಕೋಣನ್ ಮುಂದೆ ಕಿನ್ನರಿ ಬಾರಿಸ್ದಂಗೆ' ಎಂದು ಹೀಗಳೆದ. ಕಸ್ತೂರ್‌ಬಾಗೆ ಮಗನ ಹೋಲಿಕೆ ಹಿಡಿಸಲಿಲ್ಲ. 'ಬೇಸರದಿಂದ ಹಾಗೆಲ್ಲ ಮಾತಾಡ್‌ಬೇಡ ಹರಿ, ಅವ್ರ್ ಏನೇ ಮಾಡಿದ್ರು ನನ್ ಗಂಡ' ಎಂದರು.

ಹರಿಲಾಲ್‌ಗೆ ಅಷ್ಟರಲ್ಲಿ ತಾಳ್ಮೆ ತಪ್ಪಿತ್ತು. 'ಹೌದು, ನಿನ್ ಗಂಡ; ನನ್ ಹುಟ್ಸಿದ್ ಗಂಡ. ಸಮಾಜದ್ ಜವಾಬ್ದಾರಿ ಅಂತ ಸಂಸಾರದ್ ಜವಾಬ್ದಾರಿ ಮರ್‍ತಿರೋ ಗಂಡ' ಎಂದು ಬಿರುಸಾಗಿ ಅಂದಾಗ, ಕಸ್ತೂರ್‌ಬಾಗೆ ಕುಸಿದಂತಹ ಅನುಭವ.

'ನಾನಿದ್ದೀನಲ್ಲಪ್ಪ ನಿನ್ನಮ್ಮ' ಎಂದು ಏನೋ ಹೇಳಹೊರಟವರು ಹಾಗೇ ನಿಲ್ಲಿಸಿದರು.

'ಇದ್ದೀಯಮ್ಮ ಇದ್ದೀಯ. ಸಂಸಾರಕ್ ನೀನು, ಸಮಾಜಕ್ ಅವ್ರು. ನೀವ್ ಹೀಗೇ ಇರಿ; ಇಲ್ಲೇ ಇರಿ. ನಾನಂತೂ ಇಲ್ಲಿರಲ್ಲ; ನಾನಿನ್ನು ನಿಮ್ ಯಾರ್ ಮಾತೂ ಕೇಳಲ್ಲ. ನಮ್ ದೇಶಕ್ ಹೋಗ್ತೀನಿ. ಮದ್ವೆ ಆಗ್ತೀನಿ. ನನ್ ಜೀವನ ನಾನ್ ನೋಡ್ಕೊಳ್ತೀನಿ' ಎಂದವನೇ ಹರಿಲಾಲ್ ಅಮ್ಮನ ಪ್ರತಿಕ್ರಿಯೆಗೂ ಕಾಯದೆ ಹೊರಟೇ ಬಿಟ್ಟ.

ಕಸ್ತೂರ್‌ಬಾ ಈಗ ನಿಜಕ್ಕೂ ಕುಸಿದು ಕೂತರು.

ಹೆಂಡತಿಯೂ ಆಗಬೇಕು.

ತಾಯಿಯೂ ಆಗಬೇಕು.

ಎರಡೂ ಆಗುವ ಅಗ್ನಿಕೊಂಡ!

ಕೊಂಡ ಹಾಯುವ ಪರೀಕ್ಷೆ

ಹೊಂದಾಣಿಕೆಯಿದ್ದರೆ ಕೊಂಡವಿಲ್ಲ.

ಅರ್ಥಮಾಡಿಕೊಂಡರೆ ಕೆಂಡವಿಲ್ಲ.

ಸನ್ನಿವೇಶದಲ್ಲಿ ಸಮಸ್ಥಿತಿಯಿಲ್ಲ.

ಮನಸ್ಸುಗಳು ಧನುಸ್ಸಾಗುತ್ತಿವೆ.

ಬಾಂಧವ್ಯಕ್ಕೆ ಬಾಣ ಬಿಡುತ್ತಿವೆ.

ಎರಡು ಕಡೆಯ ಬಾಣದ ನಡುವೆ

ಬದುಕೇ ಯಾಕಿಷ್ಟು ಕಾಡುವೆ?

ಕಸ್ತೂರ್ ಬಾ ತನಗೆ ತಾನೇ ಪ್ರಶ್ನಿಸಿಕೊಳ್ಳುತ್ತ, ಕುಸಿಯುವ ಕರುಳಿಗೆ ಸ್ವಯಂ ಸಾಂತ್ವನ ಹೇಳಿಕೊಳ್ಳುತ್ತ, ಒಂಟಿನಂಟಿನಲ್ಲಿ ನೋಯುತ್ತ ಕೂತರು.

ಅತ್ತ ಹರಿಲಾಲ್ ಹೇಳಿದಂತೆ ಹೋಗೇಬಿಟ್ಟ. ಆದರೆ ಅಧಿಕೃತ ಪ್ರಮಾಣ ಪತ್ರವಿಲ್ಲದೆ ಹಡಗನ್ನು ಪ್ರವೇಶಿಸುವಂತಿರಲಿಲ್ಲ. ಸಿಕ್ಕಿಬಿದ್ದ. ವಿಚಾರಣೆ ವೇಳೆ ತಾನು ಮೋಹನದಾಸ ಕರಮಚಂದ ಗಾಂಧಿಯವರ ಪುತ್ರ ಎಂದು ಹೇಳಿದ. ಅಧಿಕಾರಿಗಳು ಗಾಂಧಿಯನ್ನು ಸಂಪರ್ಕಿಸಿದರು. ಗಾಂಧಿ, 'ಹೌದು ಹರಿಲಾಲ್ ನನ್ನ ಮಗ. ನನ್ನ ಮಾತೇ ಪ್ರಮಾಣ ಪತ್ರ ಅಂದ್ಕೊಂಡು ಬಿಟ್ ಬಿಡಿ. ನಮ್ ದೇಶಕ್ಕೆ ಕಳಿಸ್‌ಕೊಡಿ' ಎಂದರು. ಅಧಿಕಾರಿಗಳು ಒಪ್ಪಿದರು.

ಕಸ್ತೂರ್‌ಬಾ ಇದ್ದಲ್ಲಿಗೆ ಗಾಂಧಿ ಬಂದರು. ಬಂದವರೇ 'ಹರಿ ಹೋಗ್‌ಬಿಟ್ಟ' ಎಂದರು.

ಕಸ್ತೂರ್ ಬಾ ಬೆಚ್ಚಿದರು!

'ಹೋಗ್ಬಿಟ್ಟ?' ಎಂದು ಗಾಬರಿಯಿಂದ ಕೇಳಿದರು.

ಗಾಂಧಿ ಉದ್ವೇಗರಹಿತರಾಗಿ ಹೇಳಿದರು:

'ಗಾಬರಿ ಆಗ್‌ಬೇಡ, ಹಡಗು ಹತ್ತಿ ನಮ್ ದೇಶಕ್ ಹೋದ.' ಆನಂತರ ನಡೆದದ್ದೆಲ್ಲ ವಿವರಿಸಿದರು.

ಕಸ್ತೂರ್‌ಬಾ ಮೆಲ್ಲಗೆ ಉಸುರಿದರು.

ಉಸಿರೇ ಮಾತಾಗಿ ಹೊರಬಂದಿತ್ತು:

'ಅಂತೂ ಅಪ್ಪ ಆಗಿ ಈ ಒಂದ್ ಕೆಲ್ಸನಾದ್ರೂ ಮಾಡಿದ್ರಿ!'

ಗಾಂಧಿಗೆ ನಿಟ್ಟುಸಿರು ತಟ್ಟಿತು.

ಮಾತಿನ ಉಸಿರು ಕಟ್ಟಿತು!

ಕದ್ದು ಬರುತ್ತಿದ್ದ ಕಣ್ಣೀರಿಗೆ

ಬುದ್ಧಿ ಹೇಳಿದರು ಬರದಂತೆ!

ಹೊರಟರು ಏನೂ ಆಗದಂತೆ.

ಹೀಗೇ ಒಂದೆರಡು ದಿನ ಕಳೆಯಿತು. ಕಸ್ತೂರ್‌ಬಾ ಮಣಿಲಾಲನಲ್ಲಿ ತನ್ನ ಭಾವನೆಗಳನ್ನು ತೋಡಿಕೊಂಡರು. ಅಪ್ಪ ಮತ್ತು ಅಣ್ಣನ ಸ್ವಭಾವಗಳು ಗೊತ್ತಿದ್ದ ಆತ ಅಸಹಾಯಕನಾಗಿದ್ದ. ತಾಯಿಗೆ ಒಂದೆರಡು ಸಾಂತ್ವನದ ನುಡಿ ಹೇಳುವುದನ್ನು ಬಿಟ್ಟರೆ ಬೇರೇನು ಸಾಧ್ಯ? ಕಸ್ತೂರ್ ಕೊರಗುವುದು ನಿಲ್ಲಲಿಲ್ಲ. ಗಾಂಧಿ ಮತ್ತೆ ಹರಿಯ ವಿಷಯ ಎತ್ತಲಿಲ್ಲ. ಅವರೊಳಗೂ ಉಸಿರಿನ ಹೊಯ್ದಾಟ. ಆದರೆ ಹೊರಗಿನ ಕೆಲಸದಲ್ಲಿ ಹೊಯ್ದಾಟದ ಜಾಗಕ್ಕೆ ಹೋರಾಟ.

ಕಸ್ತೂರ್‌ಬಾಗೆ ಮನೆಯೊಳಗೆ ಮೌನ

ಮನದೊಳಗೆ ಮಾತಿನ ಯಾನ

ಅಲೆಗಳ ಏರಿಳಿತದಲ್ಲಿ ತಲ್ಲಣ

ಗೊತ್ತಿಲ್ಲ ಎತ್ತಲೊ ಈ ಪಯಣ!

ಹೀಗೆ ಒಳಗಿನ ನುಡಿಯಾನದಲ್ಲಿ ನಡೆಯುತ್ತ, ಮಿಡಿಯುತ್ತ, ಅಲೆ ಹೊಡೆತ ಅನುಭವಿಸುತ್ತ, ಹೊರಬರಲಾಗದ ನುಡಿಗೆ ನಡುಗುತ್ತ, ಇರುವಾಗ ಒಂದು ರಾತ್ರಿ, ಗಾಂಧಿ ಹೇಳಿದರು:

'ಇವತ್ತಿನಿಂದ ನಾವು ಬೇರೆ ಬೇರೆ ಮಲಗೋಣ.'

ಕಸ್ತೂರ್‌ಬಾ ಬೆಚ್ಚಿದರು. ಯಾಕಿಂತ ತೀರ್ಮಾನ? ಏನಾಯಿತು ಇವರಿಗೆ? ತಾನೇನಾದರೂ ತಪ್ಪು ಮಾಡಿದೆನಾ? ಅಥವಾ ಗಾಂಧಿಗೆ ಬೇರೆಲ್ಲೊ ಆಕರ್ಷಣೆ? ಛೆ! ಛೆ! ಗಾಂಧಿ ಅಂಥವರಲ್ಲ.